2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟ ಇವರ ನ್ಯಾಯಾಲಯದಲ್ಲಿ

ಸತ್ರ ಮೊಕದ್ದಮೆ ಸಂಖ್ಯೆ: 48/2013

| | | | |
|---|---|---|---|
| ಹೆಸರು | : | ಅಕ್ಕಮಹಾದೇವಿ ಕಂದಕೂರ | ಫ್ರಾಸಾ-02 |
| ಗಂಡನ ಹೆಸರು | : | ದೊಡ್ಡಪ್ಪ | ಚಾಸಾ-07 |
| ವಯಸ್ಸು | : | 55 ವರ್ಷ | |
| ಉದ್ಯೋಗ | : | ಮನೆಗೆಲಸ | |
| ವಾಸಸ್ಥಳ | : | ಗೋನಾಳ ಎಸ್.ಟಿ., | |

ದಿನಾಂಕ: 10-03-2021 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಸಾಕ್ಷಿಯ ವಿಚಾರಣೆ: ಕಲಂ 299 ಸಿ.ಆರ್.ಪಿ.ಸಿ., ಅಡಿಯಲ್ಲಿ**

**ಮುಖ್ಯ ವಿಚಾರಣೆ: ಸಾರ್ವಜನಿಕ ಅಭಿಯೋಜಕರಿಂದ:**

ಫ್ರಾಸಾ-1 ದೊಡ್ಡಪ್ಪ ನನ್ನ ಗಂಡ. ಚಾಸಾ-8 ಮತ್ತು 9 ನನ್ನ ಮಕ್ಕಳು. 2011 ರಲ್ಲಿ ನಾವು ನಮ್ಮ ತೋಟದ ಮನೆಯಲ್ಲಿ ವಾಸವಾಗಿದ್ದೆವು, ಸದರಿ ಜಮೀನು ಚಾಸಾ-14 ಇವರಿಗೆ ಸೇರಿರುತ್ತದೆ. ಈಗ ಸುಮಾರು 10 ವರ್ಷಗಳ ಹಿಂದೆ ಅಂದರೆ 2011 ರಲ್ಲಿ ನಾವೆಲ್ಲರೂ ಮನೆಯಲ್ಲಿ ಊಟ ಮಾಡಿ ಮಲಗಿಕೊಂಡಿದ್ದಾಗ ರಾತ್ರಿ 10-30 ಗಂಟೆ ಸುಮಾರಿಗೆ ನಾಲ್ಕು ಜನ ಒಮ್ಮೆಲೇ ನಮ್ಮ ಮನೆಗೆ ಪ್ರವೇಶ ಮಾಡಿದರು. ಆ ಪೈಕಿ ಇಬ್ಬರು ಮನೆಯ ಒಳಗಿನ ರೂಮಿನ ಬಾಗಿಲನ್ನು ಒದ್ದು ಒಳಗೆ ಹೋದರು. ಅವರ ಕೈಯಲ್ಲಿ ಚಾಕು, ಬಡಿಗೆ ಇದ್ದವು. ಒಬ್ಬ ಕಳ್ಳ ನನಗೆ ಚಾಕು ತೋರಿಸಿ, ನನ್ನ ಕಿವಿಯಲ್ಲಿದ್ದ ಬಂಗಾರದ ಓಲೆ ಮತ್ತು ತಾಳಿಸರ ಬಿಚ್ಚಿ ಕೊಡುವಂತೆ ಹೇಳಿದ. ನಾನು ಹೆದರಿ ಅವುಗಳನ್ನು ಬಿಚ್ಚಿ ಕೊಟ್ಟೆ. ಕಳ್ಳರು ನನ್ನ ಕಿವಿಯಲ್ಲಿನ ಓಲೆಯನ್ನು ಜಗ್ಗಿದ್ದರಿಂದ ನನ್ನ ಕಿವಿಗೆ ಗಾಯವಾಯಿತು. ನನ್ನ ಮಗಳು ಚಾಸಾ-8 ಸಂಗೀತಾ ಇವಳಿಗೂ ಸಹ ಚಾಕು ತೋರಿಸಿ ಹೆದರಿಸಿ, ಮೈಮೇಲಿನ ಒಡವೆಗಳನ್ನು ಬಿಚ್ಚಿ ಕೊಡುವಂತೆ ಹೇಳಿದ್ದರಿಂದ, ಅವಳ ಕತ್ತಿನಲ್ಲಿದ್ದ ಒಂದು ಬಂಗಾರದ ಚೈನ ಮತ್ತು ಕಿವಿಯೋಲೆಯನ್ನು ಕಳ್ಳರು ಕಸಿದುಕೊಂಡಿರುತ್ತಾರೆ. ಮನೆಯಲ್ಲಿಟ್ಟಿದ ಎರಡು ಮೊಬೈಲ್ ಮತ್ತು ಟ್ರಂಕಿನಲ್ಲಿದ್ದ ಐದು ಸಾವಿರ ರೂಪಾಯಿ ಹಣವನ್ನು, ಬೆಳ್ಳಿ ಸಾಮಾನುಗಳನ್ನು ಕಳ್ಳರು ತೆಗೆದುಕೊಂಡು ಹೋಗಿರುತ್ತಾರೆ. ಕಳ್ಳರು 10-30 ರಿಂದ 10-45 ಗಂಟೆಯ ಅವಧಿಯಲ್ಲಿ ನಮ್ಮ ಮನೆಂದುನ್ನು ದೋಚಿ ಅಂದಾಜು ಒಂದು ಲಕ್ಷ ಇಪ್ಪತ್ತು ಸಾವಿರ ಹಣ ನಮಗೆ ನಷ್ಟ

ಮಾಡಿರುತ್ತಾರೆ. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ. ಮನೆಯಲ್ಲಿ ಕಳುವಾದ ವಸ್ತುಗಳ ಬಗ್ಗೆ ಪುನಃ ಹೇಳಿಕೆ ಕೊಟ್ಟಿರುತ್ತೇನೆ. ಆ ದಿನ ಬಂದ ಕಳ್ಳರನ್ನು ನಾನು ನೋಡಿದರೆ ಗುರುತಿಸುತ್ತೇನೆ. ಪೊಲೀಸರು ಈ ಮೊದಲು ನಮಗೆ ಕಳ್ಳರನ್ನು ತೋರಿಸಿದ್ದರು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

Sd/-
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಾಗಲಕೋಟ.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟ ಇವರ ನ್ಯಾಯಾಲಯದಲ್ಲಿ

ಸತ್ರ ಮೊಕದ್ದಮೆ ಸಂಖ್ಯೆ: 48/2013

| | | | |
|---|---|---|---|
| ಹೆಸರು | ಃ | ಸಂಗೀತಾ ಕಂದಕೂರ | ಫ್ರಾಸಾ-03 |
| ತಂದೆಯ ಹೆಸರು | ಃ | ದೊಡ್ಡಪ್ಪ | ಚಾಸಾ-08 |
| ವಯಸ್ಸು | ಃ | 30 ವರ್ಷ | |
| ಉದ್ಯೋಗ | ಃ | ಖಾಸಗಿ ಕೆಲಸ | |
| ವಾಸಸ್ಥಳ | ಃ | ಗೋನಾಳ ಎಸ್.ಟಿ., | |

ದಿನಾಂಕಃ 10-03-2021 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**<u>ಸಾಕ್ಷಿಯ ವಿಚಾರಣೆಃ ಕಲಂ 299 ಸಿ.ಆರ್.ಪಿ.ಸಿ., ಅಡಿಯಲ್ಲಿ</u>**

<u>ಮುಖ್ಯ ವಿಚಾರಣೆಃ ಸಾರ್ವಜನಿಕ ಅಭಿಯೋಜಕರಿಂದಃ</u>

ಫ್ರಾಸಾ-1 ದೊಡ್ಡಪ್ಪ ನನ್ನ ತಂದೆ. ಚಾಸಾ-7 ನನ್ನ ತಾಯಿ. ಚಾಸಾ-9 ನನ್ನ ತಮ್ಮ. 2011 ರಲ್ಲಿ ನಾವು ನಮ್ಮ ತೋಟದ ಮನೆಯಲ್ಲಿ ವಾಸವಾಗಿದ್ದೆವು, ಸದರಿ ಜಮೀನು ಚಾಸಾ-14 ಇವರಿಗೆ ಸೇರಿರುತ್ತದೆ. ಈಗ ಸುಮಾರು 10 ವರ್ಷಗಳ ಹಿಂದೆ ಅಂದರೆ 2011 ರಲ್ಲಿ ನಾವೆಲ್ಲರೂ ಮನೆಯಲ್ಲಿ ಊಟ ಮಾಡಿ ಮಲಗಿಕೊಂಡಿದ್ದಾಗ ರಾತ್ರಿ 10-30 ಗಂಟೆ ಸುಮಾರಿಗೆ ನಾಲ್ಕು ಜನ ಕಳ್ಳರು ದಿಢೀರನೆ ನಮ್ಮ ಮನೆಗೆ ಪ್ರವೇಶ ಮಾಡಿದರು. ಆ ಪೈಕಿ ಇಬ್ಬರು ಮನೆಯ ಒಳಗಿನ ರೂಮಿನ ಬಾಗಿಲನ್ನು ಒದ್ದು ಒಳಗೆ ಹೋದರು. ಅವರ ಕೈಯಲ್ಲಿ ಚಾಕು, ಬಡಿಗೆ ಇದ್ದವು. ಒಬ್ಬ ಕಳ್ಳ ನನ್ನ ತಾಯಿಗೆ ಚಾಕು ತೋರಿಸಿ, ಅವರ ಕಿವಿಯಲ್ಲಿದ್ದ ಬಂಗಾರದ ಓಲೆ ಮತ್ತು ತಾಳಿಸರ ಬಿಚ್ಚಿ ಕೊಡುವಂತೆ ಹೇಳಿದ. ಅವರು ಹೆದರಿ ಅವುಗಳನ್ನು ಬಿಚ್ಚಿ ಕೊಡುವಷ್ಟರಲ್ಲಿ ಒಬ್ಬ ಕಳ್ಳ ನನ್ನ ತಾಯಿಯ ಕಿವಿಯಲ್ಲಿನ ಓಲೆಯನ್ನು ಜಗ್ಗಿದ್ದರಿಂದ ನನ್ನ ತಾಯಿಯ ಕಿವಿಗೆ ಗಾಯವಾಯಿತು. ನನಗೂ ಸಹ ಚಾಕು ತೋರಿಸಿ ಹೆದರಿಸಿ, ಮೈಮೇಲಿನ ಒಡವೆಗಳನ್ನು ಬಿಚ್ಚಿ ಕೊಡುವಂತೆ ಹೇಳಿದ್ದರಿಂದ, ನನ್ನ ಕತ್ತಿನಲ್ಲಿದ್ದ ಒಂದು ಬಂಗಾರದ ಚೈನ ಮತ್ತು ಕಿವಿಯೋಲೆಯನ್ನು ಕಳ್ಳರು ಕಸಿದುಕೊಂಡಿರುತ್ತಾರೆ. ಮನೆಯಲ್ಲಿಟ್ಟಿದ್ದ ಎರಡು ಮೊಬೈಲ್ ಮತ್ತು ಟ್ರಂಕಿನಲ್ಲಿದ್ದ ಐದು ಸಾವಿರ ರೂಪಾಯಿ ಹಣವನ್ನು, ಬೆಳ್ಳಿ ಸಾಮಾನುಗಳನ್ನು ಕಳ್ಳರು ತೆಗೆದುಕೊಂಡು ಹೋಗಿರುತ್ತಾರೆ. ಕಳ್ಳರು 10-30 ರಿಂದ 10-45 ಗಂಟೆಯ ಅವಧಿಯಲ್ಲಿ ನಮ್ಮ ಮನೆಯನ್ನು ದೋಚಿ ಅಂದಾಜು ಒಂದು ಲಕ್ಷ

ಇಪ್ಪತ್ತು ಸಾವಿರ ಹಣ ನಮಗೆ ನಷ್ಟ ಮಾಡಿರುತ್ತಾರೆ. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ. ಮನೆಯಲ್ಲಿ ಕಳುವಾದ ವಸ್ತುಗಳ ಬಗ್ಗೆ ಪುನಃ ಹೇಳಿಕೆ ಕೊಟ್ಟಿರುತ್ತೇನೆ. ಆ ದಿನ ಬಂದ ಕಳ್ಳರನ್ನು ನಾನು ನೋಡಿದರೆ ಗುರುತಿಸುತ್ತೇನೆ. ಪೊಲೀಸರು ಈ ಮೊದಲು ನಮಗೆ ಕಳ್ಳರನ್ನು ತೋರಿಸಿದ್ದರು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

Sd/-
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಾಗಲಕೋಟ.